ಈ) ಸರ್ಕಾರಿ ಕಾಲೇಜಿನಲ್ಲಿ ಹಾಗೂ ಖಾಸಗಿ ಕಾಲೇಜಿನಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವರು? ಮತ್ತು ಪ್ರತಿಯೊಂದು ಕಾಲೇಜಿಗೆ ವಿದ್ಯಾಭ್ಯಾಸಕ್ಕಾಗಿ ರಾಜ್ಯ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತಿರುವುದು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.):-

ಅ) . ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಪ್ರತಿಯೊಬ್ಬ ಫಾರ್ಮಸಿ ವಿದ್ಯಾರ್ಥಿಗೆ ಆತ ಶಿಕ್ಷಣ ಹೊಂದುವ ಕೋರ್ಸನ್ನು ಮುಗಿಸಲು ತಗಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.

1) ಡಿಪ್ಲೊಮೊ (ಫಾರ್ಮಸಿ) :	ರೂ. 0730-00
2) ಪದವಿ (ಫಾರ್ಮಸಿ) :	ರೂ. 2544-00
3) ಸ್ನಾತಕೋತ್ತರ (ಫಾರ್ಮಸಿ) :	ರೂ. 1897-00

ಆ) ಸರ್ಕಾರ ಶುಲ್ಕ ನಿಯಮಗಳನ್ನು ರೂಪಿಸಿಲ್ಲ, ಆದ್ದರಿಂದ ಈ ಪ್ರಶ್ನೆಗೆ ಮಾಹಿತಿ ಲಭ್ಯವಿರುವುದಿಲ್ಲ.

ಇ) ಮೊದಲೆರಡು ಪ್ರಶ್ನೆಗಳ ಉತ್ತರವೇ ಇದಕ್ಕೂ ಅನ್ವಯಿಸುವುದು.

ಈ) ಸರ್ಕಾರಿ ಫಾರ್ಮಸಿ ಕಾಲೇಜು, ಬೆಂಗಳೂರು.

ಶೈಕ್ಷಣಿಕ ಕೋರ್ಸ್‌ಗಳು	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
ಡಿಪ್ಲೊಮಾ	120
ಪದವಿ	200
ಸ್ನಾತ್ತಕೋತ್ತರ	48
ಖಾಸಗಿ ಫಾರ್ಮಸಿ ಕಾಲೇಜುಗಳು.	
ಡಿಪ್ಲೊಮಾ (ಫಾರ್ಮಸಿ)	6280
ಪದವಿ (ಫಾರ್ಮಸಿ)	4560
ಸ್ನಾತಕೋತ್ತರ ಪದವಿ(ಫಾರ್ಮಸಿ)	72

ಕೇವಲ ಸರ್ಕಾರಿ ಫಾರ್ಮಸಿ ಕಾಲೇಜಿನ ಶಿಕ್ಷಣದ ಕೋರ್ಸ್‌ಗಳಿಗೆ ಸಂಭಂಧಿಸಿದ ವೆಚ್ಚವನ್ನು ಸರ್ಕಾರ ಭರಿಸುತ್ತಿದೆ. ಪ್ರಸ್ತುತ ವರ್ಷದಲ್ಲಿ ಸರ್ಕಾರಿ ಕಾಲೇಜಿನ ಶಿಕ್ಷಣಗಳ ವೆಚ್ಚ 38.21 ಲಕ್ಷ ರೂ. ಗಳಾಗಿವೆ. ಖಾಸಗಿ ಫಾರ್ಮಸಿ ಕಾಲೇಜುಗಳ ಶಿಕ್ಷಣಕ್ಕೆ ಸರ್ಕಾರದ ಯಾವುದೇ ಧನ ಸಹಾಯ ದೊರೆಯುತ್ತಿಲ್ಲ.

ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ನೇಸರ್ಗಿ ಗ್ರಾಮದಲ್ಲಿ ಸರ್ಕಾರ ಐ.ಟಿ.ಐ. ಕೋರ್ಸ್ ಪ್ರಾರಂಭಿಸುವುದು

261 (102) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಕಾರ್ಮಿಕ ಸಚಿವರೆ ಈ ವಿಷಯವನ್ನು ದಯವಿಟ್ಟು ತಿಳಿಸುವರೆ;

ಅ) ಬೆಳಗಾಂ ಜಿಲ್ಲೆ ಬೈಲ ಹೊಂಗಲ ತಾಲ್ಲೂಕು ನೇಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ತರಬೇತಿ ಕೇಂದ್ರ ತೆರೆಯಲು ಸಾರ್ವಜನಿಕರಿಂದ ಮನವಿ ಪತ್ರ ಬಂದಿದೆಯೆ?

ಆ) ಹಾಗಿದ್ದಲ್ಲಿ ಅಲ್ಲಿ ತರಬೇತಿ ಕೇಂದ್ರ ತೆರೆಯಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು.

ಇ) ಹಿಂದಿನ ಅಧಿವೇಶನದಲ್ಲಿ ಮಾನ್ಯ ಕಾರ್ಮಿಕ ಸಚಿವರು ಆಯವ್ಯಯ ಮೇಲೆ ಉತ್ತರ ಕೊಡುವ ಕಾಲಕ್ಕೆ ಬೈಲ ಹೊಂಗಲ ತಾಲ್ಲೂಕು ಪೈಕಿ ನೇಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ಆಶ್ವಾಸನೆ ನೀಡಿದ ಮೇರೆಗೆ ಸರ್ಕಾರದವರು ಅಲ್ಲಿ ತರಬೇತಿ ಕೇಂದ್ರ ತೆರೆಯಲು ಯಾವ ಕ್ರಮ ಕೈಗೊಂಡಿರುವರು.

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು):-

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) 8ನೇ ಯೋಜನೆಯ ಅವಧಿಯಲ್ಲಿ ಪರಿಶೀಲಿಸಲಾಗುವುದು.

ರೇಷ್ಮೆ ಹುಳುಗಳಿಗೆ ಗಂಟು ರೋಗ

163 (118) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ರೇಷ್ಮೆ ಬೆಳೆಗಳಿಗೆ ಗಂಟು ರೋಗ ತಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರವು ಇದರ ಬಗ್ಗೆ ಏನಾದರೂ ಕ್ರಮಕೈಗೊಂಡಿದೆಯೇ?

ಇ) ಹಾಗಿದ್ದಲ್ಲಿ ಈ ರೋಗ ಎಷ್ಟರ ಮಟ್ಟಿಗೆ ಸುಧಾರಿಸಿದೆ.

ಶ್ರೀ ವಿ. ಮುನಿಯಪ್ಪ (ರಾಜ್ಯ ರೇಷ್ಮೆ ಸಚಿವರು):-

ಅ) ಗಂಟು ರೋಗವು ಸೇರಿದಂತೆ ರೇಷ್ಮೆ ಹುಳುಗಳಿಗೆ ಬರತಕ್ಕಂತಹ ಸುಣ್ಣ ಕಟ್ಟು, ಹಾಲು ಮತ್ತು ಸಪ್ಪೆ ರೋಗಗಳಿಂದ ಬೆಳೆಗಳು ಕೆಟ್ಟಿವೆ. ರೇಷ್ಮೆ ಬೆಳೆ ಕೆಡಲು ಅನೇಕ ಕಾರಣಗಳಿವೆ.

1) ವೈಜ್ಞಾನಿಕ ರೀತಿಯಲ್ಲಿ ಹುಳು ಸಾಕಣೆ ಮಾಡದೆ ಇರುವುದು.

2) ವಾತಾವರಣದ ವೈಪರೀತ್ಯಗಳು.

3) ರೇಷ್ಮೆ ಹುಳುಗಳಿಗೆ ಬರತಕ್ಕಂಥ ರೋಗಗಳು.

ಆ) ಹೌದು.

ಗಂಟು ರೋಗವನ್ನು ತಡೆಯಲು ಅನುಸರಿಸುತ್ತಿರುವ ಕ್ರಮಗಳನ್ನು ತೀವ್ರಗೊಳಿಸಲಾಗಿದೆ. ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಬಿತ್ತನೆ ವಲಯದಲ್ಲಿ ಹುಳು ಸಾಕಣೆ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಬೆಳೆಗಿನ ಮುನ್ನ ಸಿಂಪಡಿಸಲಾಗುತ್ತದೆ. ಮುಂಜಾಗ್ರತೆಗೆ ಬಂದ ಗೂಡುಗಳನ್ನು ಪರೀಕ್ಷಿಸಿ ಗಂಟು ರೋಗ ಕಣಗಳು ಕಾಣ ಬಂದರೆ ಆ ಗೂಡನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ತೀರ್ಮಾನಿಸಲಾಗುತ್ತದೆ. ಬಿತ್ತನೆ ಗೂಡನ್ನು ಉತ್ಪನ್ನ ಮಾಡುವಾಗ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಿ ಸೆಲ್ಕೂಲಾರ್ ಸಾಕಾಣಿಕೆ ಕ್ರಮವನ್ನು ಅನುಸರಿಸಲಾಗುತ್ತಿದೆ ಮತ್ತು ಪ್ರತಿ ರೈತರು ಹುಳು ಸಾಕಣೆ ಕ್ರಮವನ್ನು ವೀಕ್ಷಿಸಿ ಆಚರಣೆಗೆ ತರಲು ವ್ಯವಸ್ಥೆ ಮಾಡಲಾಗಿದೆ. ಮಿಶ್ರ ತಳಿ ಪ್ರದೇಶದಲ್ಲಿ ಗಂಟು ರೋಗವನ್ನು ತಡೆಗಟ್ಟಲು ಪ್ರತಿ ಬೆಳೆಯಾದ ನಂತರ ಎಲ್ಲಾ ರೇಷ್ಮೆ ಬೆಳೆಗಾರರ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ ಮಾಡಲಾಗುತ್ತಿದೆ. ಒಂದು ಪಂಗಡದಲ್ಲಿ ತಯಾರಾದ ಮೊಟ್ಟೆಗಳನ್ನು ಬಿತ್ತನೆ ಬೆಳೆಗಾರರಿಗೆ ವಿತರಣೆ ಮಾಡಿ ಆದರ ಸಾಕಾಣಿಕೆಯಲ್ಲಿ ಯಾವುದೇ ಬಿತ್ತನೆ ಬೆಳೆಗಾರರಿಗೆ ಬೆಳೆಯಲ್ಲಿ ಗಂಟುರೋಗ ಕಾಣ ಬಂದರೆ ಆ ಪಂಗಡದ ಎಲ್ಲಾ ಬೆಳೆಗಳನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ನೂಲು ಬಿಚ್ಚಾಣಿಕೆಗೆ ಕೊಡಲಾಗುತ್ತಿದೆ.

ಇ) ರೋಗ ನಿಯಂತ್ರಣದಲ್ಲಿದೆ.

ಆಸ್ಪತ್ರೆಗಳಿಗೆ ಬಿಡುಗಡೆ ಮಾಡಲಾದ ಔಷಧಿಗೆ ಒದಗಿಸಿದ ಹಣ

265 (125) ಶ್ರೀ ಬಿ. ಹೆಚ್. ಬನ್ನಿಕೋಡ್, (ಹಿರೇಕೆರೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) 1991-92ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಔಷಧಿ ಪೂರೈಸಲು ಆಯವ್ಯಯದಲ್ಲಿ ಸರ್ಕಾರದಿಂದ ಒದಗಿಸಿದ ಹಾಗೂ ಖರ್ಚಾದ ಹಣವೆಷ್ಟು?